

1

# “ಸೋಮು” ಅಪರಿಚಿತರಿಂದ ರಕ್ಷಿಸಿಕೊಳ್ಳುವ ನಿಯಮಗಳನ್ನು ಮರೆತಾಗ





ಒಂದಾನೊಂದು ಕಾಲದಲ್ಲಿ ಸೋಮು ಎಂಬ ಬಾಲಕನಿದ್ದ. ಆತ ತನ್ನ ಪೋಷಕರು ಮತ್ತು ನಾಯಿ ಟಾಮಿಯೊಂದಿಗೆ ವಾಸವಾಗಿದ್ದ. ಸೋಮುವಿನ ಮನೆಯ ಬೀದಿ ಜನರಿಂದ ತುಂಬಿತ್ತು. ಹತ್ತಿರದಲ್ಲಿ ಉದ್ಯಾನವನವೂ ಇತ್ತು. ಟಾಮಿ ಕಂದು ಬಣ್ಣದ ನುಣುಪಾದ ಕೂದಲೂ ಹೊಳಪುಗಣ್ಣಿನ ನಾಯಿ. ಆ ನಾಯಿ ಬಹು ಸ್ನೇಹಮಯಿ, ತನ್ನ ಪಾಲಕ ಸೋಮುವಿನಿಂದ ಮೆಚ್ಚುಗೆ ಪಡೆದಿತ್ತು.



ಸೋಮು ಮತ್ತು ಟಾಮಿ ಇಬ್ಬರೂ ಆತ್ಮೀಯ ಸ್ನೇಹಿತರು, ಚೆಂಡಾಟ, ಈಜುವುದು, ಒಗ್ಗೂಡಿ ಆಡುತ್ತಿದ್ದರು. ಸೋಮು ಬಿಸ್ಕತ್, ಐಸ್‌ಕ್ರೀಮ್‌ಗಳನ್ನು ಟಾಮಿಯ ಜೊತೆ ಹಂಚಿಕೊಳ್ಳುತ್ತಿದ್ದ, ಟಾಮಿ ಶಾಲೆಗೆ ಸೋಮುವನ್ನು ಹಿಂಬಾಲಿಸುತ್ತಿತ್ತು.







ಒಂದು ದಿನ ಸೋಮು ಮತ್ತು ಟಾಮಿ ಉದ್ಯಾನವನದಲ್ಲಿ ಆಡುತ್ತಿದ್ದರು. ಇದ್ದಕ್ಕಿದ್ದಂತೆ ಒಬ್ಬ ವ್ಯಕ್ತಿ ಸೋಮುವಿನೊಂದಿಗೆ ಮಾತನಾಡತೊಡಗಿದ."ಆಹಾ, ಸುಂದರವಾದ ಆಟದ ಚೆಂಡು, ನಾನು ನಿಮ್ಮ ಜೊತೆ ಆಡಲೆ?" ಎಂದು ಸೋಮುವಿಗೆ ಕೇಳಿದ. ಸೋಮು ನಕ್ಕು ಅವರೊಡನೆ ಆಟವಾಡಲು ಒಪ್ಪಿದ. ಟಾಮಿಗೆ ಆಶ್ಚರ್ಯವಾಯಿತು, ಸೋಮು ಈ ಅಪರಿಚಿತನೊಂದಿಗೆ ಏಕೆ ಮಾತನಾಡುತ್ತಿದ್ದಾನೆ. ಅಮ್ಮ ಅಪರಿಚಿತರ ಬಗ್ಗೆ ಹೇಳಿದ ನುಡಿ ಮರೆತನೆ? ಹೀಗೆ ಅಪರಿಚಿತರೊಂದಿಗೆ ಮಾತನಾಡಬಾರದಲ್ಲವೇ? ಅದು ಸುರಕ್ಷಿತವಲ್ಲ ಎಂದು ಅಮ್ಮ ಹೇಳಿದ್ದು ನೆನಪಾಯಿತು.



ಕೆಲವು ಕ್ಷಣಗಳ ನಂತರ ಆಟಿಕೆ ಅಂಗಡಿಗೆ ಹೋಗಿ ಹಾಗೆ ಐಸ್‌ಕ್ರೀಂ ತಿಂದುಕೊಂಡು ಬರೋಣ ಎಂದು ಕರೆದ. ಸೋಮು ಅಪರಿಚಿತ ವ್ಯಕ್ತಿಯ ಜೊತೆಗೆ ಹೋಗುತ್ತಿರುವುದನ್ನು ನೋಡಿ ಟಾಮಿ ಚಿಂತಾಕ್ರಾಂತನಾದ. ಅವರನ್ನು ಹಿಂಬಾಲಿಸಲು ನಿರ್ಧರಿಸಿದ. ಆ ಮನುಷ್ಯನಿಗೆ ಟಾಮಿ ಹಿಂದೆ ಬರುತ್ತಿರುವುದು ತಿಳಿದಿರಲಿಲ್ಲ. ಸೋಮು ಆಟಿಕೆ ಮತ್ತು ಐಸ್‌ಕ್ರೀಂಗಾಗಿ ಕಾತರನಾಗಿದ್ದ.




ಸ್ವಲ್ಪ ಸಮಯದ ನಂತರ ಸೋಮುವಿಗೆ ತಾವು ಮಾರುಕಟ್ಟೆಯ ರಸ್ತೆಯಲ್ಲಿ ಹೋಗುತ್ತಿಲ್ಲ ಎಂದು ಅರಿವಾಯಿತು, ಅಲ್ಲಿ ಯಾವುದೇ ವ್ಯಕ್ತಿ ಅಥವಾ ಸ್ಥಳವನ್ನು ಅವನಿಗೆ ಗುರುತಿಸಲಾಗಲಿಲ್ಲಾ ಸೋಮು “ಇಲ್ಲಿ ಯಾವುದೇ ಆಟಿಕೆ ಅಂಗಡಿ ಅಥವಾ ಐಸ್‌ಕ್ರೀಂ ಅಂಗಡಿ ಇಲ್ಲ” ಎಂದು ಅನುಮಾನದಿಂದ ಹೇಳಿದ. ಅಪರಿಚಿತ ಏನೂ ಹೇಳಲಿಲ್ಲ. ಸೋಮು ಹೆದರಿ ನಡುಗಿದ. ಅವರು ಎಲ್ಲಿಗೆ ಹೋಗುತ್ತಿದ್ದರು? ಆ ಮನುಷ್ಯ ಎಲ್ಲಿಗೆ ಕರೆದುಕೊಂಡು ಹೋಗುತ್ತಿದ್ದಾನೆ?



ಕಡೆಯದಾಗಿ ಒಂದು ಪಾಳು ಬಂಗಲೆಯ ಕಡೆ ಹೋದ. ಸೋಮುವಿಗೆ ಹೊರಗೆ ಕಟ್ಟೆಯ ಮೇಲೆ ಕುಳಿತುಕೊಳ್ಳಲು ಹೇಳಿದ. ಈಗ ಆ ವ್ಯಕ್ತಿಯ ಮಾತನಾಡುವ ಧಾಟಿಯೇ ಬದಲಾಗಿತ್ತು. ಹಿಂದೆ ಉದ್ಯಾನವನದಲ್ಲಿ ಮಾತನಾಡಿದಂತೆ ಎನಿಸಲಿಲ್ಲ. ಸೋಮು ಹೊರಗೆ ಕುಳಿತು ಅಳತೊಡಗಿದ. “ನಾನು ಮನೆಗೆ ಹೋಗಬೇಕು. ಅಮ್ಮ ಅಪ್ಪನನ್ನು ನೋಡಬೇಕು. ನಾನು ಈ ಅಪರಿಚಿತ ವ್ಯಕ್ತಿ ಜೊತೆ ಅಪರಿಚಿತ ಸ್ಥಳದಲ್ಲಿ ಕಳೆದು ಹೋಗಿದ್ದೇನೆ ಎಂದು ಹೆದರಿ ಅಳತೊಡಗಿದನು.





ಅಷ್ಟರಲ್ಲಿ ಟಾಮಿ ಅಲ್ಲಿಗೆ ಬಂತು, ಸೋಮು ಅಳುತ್ತಾ ಅದನ್ನು ಅಪ್ಪಿದ. ಹೋ ಟಾಮಿ ನೀನಿಲ್ಲಿರುವುದು ನನಗೆ ಸಂತಸ ತಂದಿದೆ.

ಟಾಮಿ ಸೋಮುವಿನ ಅಂಗಿಯನ್ನು ಎಳೆಯಿತು. “ಹೋ ನಿನಗೆ ಮನೆಯ ದಾರಿ ಗೊತ್ತೇ? ನಡಿ ಹೊರಡೋಣಾ, ಟಾಮಿ, ಆ ವ್ಯಕ್ತಿಬರುವ ಮುನ್ನ ಓಡೋಣ” ಎಂದು ಸೋಮು ಹೇಳಿದನು.



ಸೋಮು, ಟಾಮಿ ಓಡಿ ಮನೆ ಸೇರಿದರು.




ಅಷ್ಟರಲ್ಲಿ ಸೋಮುವಿನ ಪೋಷಕರು ಚಿಂತೆ ಮಾಡುತ್ತಿದ್ದರು. “ಎಲ್ಲಿ ಇದ್ದೆ?” ತಾಯಿ ಕೇಳಿದಳು. ಸೋಮು ನಡೆದ ಘಟನೆಯನ್ನು ವಿವರಿಸಿದನು. ಅಪರಿಚಿತನೊಂದಿಗೆ ಒಂಟಿಯಾಗಿ ಕಳೆದ ಯಾತನೆಯನ್ನು ಹೇಳಿದನು. “ಹಾಗಾದರೆ ಅಪರಿಚಿತರೊಂದಿಗೆ ಮಾತನಾಡಬಾರದೆಂಬುದನ್ನು ಮರೆತೆಯಾ? ಆಟಿಕೆ, ಸಿಹಿ ತಿಂಡಿ ಏನೇ ಕೊಟ್ಟರೂ/ಕೊಡುತ್ತೇನೆಂದರೂ ಹೋಗಬಾರದೆಂದು ಹೇಳಿರಲಿಲ್ಲವೇ?” ಅಪ್ಪ ಕೇಳಿದರು. ಸೋಮು ಬೇಸರದಿಂದ ಹೌದು ಎಂದ, ಆದರೆ ಟಾಮಿ ಎಲ್ಲ ನಿಯಮವನ್ನು ನೆ ನಪಿಟ್ಟುಕೊಂಡಿದ್ದ, ಅದಕ್ಕೆ ಅವನು ನನ್ನ ಹಿಂದೆ ಬಂದು, ನನಗಾಗುತ್ತಿದ್ದ ಅನಾಹುತ/ನೋವನ್ನು ತಪ್ಪಿಸಿದ.



ಬುದ್ಧಿವಂತ ಪ್ರಾಣಿಯನ್ನು ಮುದ್ದಿಸಿ ಹೆಚ್ಚು ಬಿಸ್ಕತ್‌ಗಳನ್ನು ನೀಡಿದರು.  ಅದಾದ ನಂತರ ಸೋಮು 3 ಸುರಕ್ಷತಾ ನಿಯಮವನ್ನು ನೆನಪಿಟುಕೊಂಡಿದ್ದ.

1. ಅಪರಿಚಿತರೊಂದಿಗೆ ಮಾತನಾಡದಿರಿ.  2. ಅವರೊಂದಿಗೆಎಲ್ಲಿಯೂ ಹೋಗದಿರಿ. 3. ಸಿಹಿ/ಆಟಿಕೆಯನ್ನು ಬಯಸದಿರಿ.

ಟಾಮಿ ನಿಯಮವನ್ನು ನೆನಪಿಟ್ಟು ಅನುಸರಿಸಿದ್ದರಿಂದ ಸೋಮು ಅಪರಿಚಿತನಿಂದ ರಕ್ಷಿಸಲ್ಪಟ್ಟ.

Community Child & Adolescent Mental Health Service Project,
Department of Child & Adolescent Psychiatry,
National Institute of Mental Health & Neruosciences (NIMHANS)
(Institute Of National Importance)
Hosur Road, Benaaluru - 560029

Website : www.nimhans.ac.in
Email : capnimhans@gmail.com

Supported by the Dept. of Women and Child Development, Govt. of Karnataka

Design and Art work : SathishRam